**ಸಾಕ್ಷಿಯನ್ನು ದಿಃ 03.08.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ ಟಿ ಆರ್ ವಕೀಲರಿಂದಃ**

ನಮ್ಮ ತಂದೆ ಯ ಜೊತೆ 3 ಜನ ಸಹೋದರರು ಎಂದರೆ ಸರಿಯಲ್ಲ. ಅವರುಗಳೆಂದರೆ ಗಂಗಯ್ಯ, ತಿಮ್ಮೇಗೌಡ ಮತ್ತು ಕೂರಲಯ್ಯ ಎಂದರೆ ಸರಿಯಲ್ಲ. ನನ್ನ ತಂದೆ ಒಬ್ಬರೇ ಮಗ ಎಂದು ನುಡಿಯುತ್ತಾರೆ. ನಮ್ಮ ಮೂಲ ಊರು ಕುಣಿಗಲ್ ತಾಲ್ಲೂಕಿನ ಒಗ್ಗರಗೆರೆ ಎಂದರೆ ಸರಿಯಲ್ಲ. ನಾವು ಕೂಲಿ ಮಾಡುವ ಲುವಾಗಿ ಹಿಗ್ಗೆ 10 ವರ್ಷಗಳ ಹಿಂದೆ ತುರುವೇಕೆರೆ ತಾಲ್ಲೂಕಿನ ಹರಳಕೆರೆಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಯಾವುದೇ ಸಹೋದರಿಯರು ಇರುವುದಿಲ್ಲ.

ನನ್ನ ತಂದೆಗೆ 5 ಜನ ಮಕ್ಕಳು. ಅವರುಗಳೆಂದರೆ ತಿಮ್ಮೇಗೌಡ, ರತ್ನಮ್ಮ, ಶ್ರೀನಿವಾಸ ಎಂದರೆ ನಾನು, ಚಂದ್ರಕಲಾ ಮತ್ತು ರಾಮೇಗೌಡ. ಪ್ರತಿವಾದಿಗಳ ಮುತ್ತಾತನ ಹೆಸರು ಮೂಡ್ಲಯ್ಯ ಅಲಿಯಾಸ್ ದೊಡ್ಡ ಎಂದೆರ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ನಮ್ಮ ತಾತ ಎಂದು ನುಡಿಯುತ್ತಾರೆ. ನಮ್ಮ ಮತ್ತು ಪ್ರತಿವಾದಿಗಳ ಜನಾಂಗ ಬೇರೆ ಬೇರೆ ಎಂದರೆ ಸರಿ. ಸದರಿ ಮೂಡ್ಲಯ್ಯ ಅಲಿಯಾಸ್ ದೊಡ್ಡನ ಮಗನ ಹೆಸರು ಚಿಕ್ಕತಿಮ್ಮಯ್ಯ ಎಂದರೆ ಸರಿ. ಸದರಿ ಚಿಕ್ಕತಿಮ್ಮಯ್ಯನಿಗೆ 6 ಜನ ಮಕ್ಕಳು ಎಂದರೆ ಸರಿಯಲ್ಲ. ಅವರುಗಳೆಂದರೆ, ನರಸಯ್ಯ, ಮೂಡ್ಲಯ್ಯ ಅಲಿಯಾಸ್ ದಾಸಪ್ಪ, ಹನುಮಯ್ಯ, ನರಸಯ್ಯ, ಹನುಮಯ್ಯ ಮತ್ತು ನರಸಿಂಹಯ್ಯ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚಿಕ್ಕತಿಮ್ಮಯ್ಯನಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ಕಾಳಗಿರಿಯಪ್ಪ ಮತ್ತು ಮೂಡ್ಲಯ್ಯ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯ ತಂದೆ ಹೆಸರು ಹನುಮಯ್ಯ ಎಂದರೆ ಸರಿ. ಸದರಿ ಹನುಮಯ್ಯನಿಗೆ 5 ಜನ ಸಹೋದರರು ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ ನರಸಯ್ಯ, ಮೂಡ್ಲಯ್ಯ ಅಲಿಯಾಸ್ ದಾಸಪ್ಪ, ಹನುಮಯ್ಯ, ನರಸಯ್ಯ, ಹನುಮಯ್ಯ ಮತ್ತು ನರಸಿಂಹಯ್ಯರವರು ಹನುಮಯ್ಯನ ಸಹೋದರರು ಎಂದರೆ ಸರಿ. ಸದರಿ ಮೂಡ್ಲಯ್ಯನಿಗೆ ಹನುಮಂತಯ್ಯ ಎಂಬ ಮಗ ಎಂದರೆ ಸರಿಯಲ್ಲ. ಸದರಿ ಹನುಮಂತಯ್ಯನ ಹೆಂಡತಿ ಹೆಸರು ನರಸಮ್ಮ ಎಂದರೆ ಗೊತ್ತಿಲ್ಲ. ಸದರಿ

ಹನುಮಂತಯ್ಯ ಮತ್ತು ನರಸಮ್ಮನಿಗೆ ಯಾವುದೇ ಸಂತಾನ ಇರುವುದಿಲ್ಲ ಎಂದರೆ ಸರಿಯಲ್ಲ. ನರಸಯ್ಯ, ಮೂಡ್ಲಯ್ಯ ಅಲಿಯಾಸ್ ದಾಸಪ್ಪ, ಹನುಮಯ್ಯ, ನರಸಯ್ಯ, ಹನುಮಯ್ಯ ಮತ್ತು ನರಸಿಂಹಯ್ಯ ರವರುಗಳ ನಡುವೆ ಸುಮಾರು 70 ವರ್ಷಗಳ ಹಿಂದೆ ಮೌಖಿಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದ ಅನ್ವಯ ಮೂಡ್ಲಯ್ಯ ಅಲಿಯಾಸ್ ದಾಸಪ್ಪನಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಮೂಡ್ಲಯ್ಯ ಅವರ ಜೀವಿತ ಕಾಲದಲ್ಲಿ ಸ್ವಾದೀನದಲ್ಲಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾತ ಮೂಡ್ಲಯ್ಯ ಸ್ವಾದೀನದಲ್ಲಿದ್ದರು ಎಂದು ನುಡಿಯುತ್ತಾರೆ. ಸದರಿ ಸ್ವತ್ತು ನನ್ನ ತಾತ ಮೂಡ್ಲಯ್ಯನಿಗೆ ವಿಭಾಗದ ಮೂಲಕ ಬಂದಿರುತ್ತದೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರು ಪಡಿಸಿರುತ್ತೇನೆ. ಸದರಿ ವಿಭಾಗ ಯಾವಾಗ ಆಗಿರುತ್ತದೆ ಎಂದು ನನಗೆ ಗೌತ್ತಿಲ್ಲ. ಅದಕ್ಕೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತಿಲ್ಲ. ಅದನ್ನು ಯಾರು ಬರೆದಿರುತ್ತಾರೆಂದು ನನಗೆ ಗೌತ್ತಿಲ್ಲ. ದಾವಾ ಸ್ವತ್ತು ನಮ್ಮ ಕುಟುಂಬಕ್ಕೆ ಸೇರಿಲ್ಲದೇ ಇರುವ ಕಾರಣ ಮತ್ತು ನಮ್ಮ ಕುಟುಂಬದ ನಡುವೆ ವಿಭಾಗ ಆಗಿಲ್ಲದೇ ಇರುವ ಕಾರಣ ಆ ರೀತಿಯಾವುದೇ ವಿಭಾಗಪತ್ರ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕಂದಾಯ ದಾಖಲೆಗಳು ನಮ್ಮ ಹೆಸರಿಗೆ ಬಂದಿರುವುದಿಲ್ಲ.

ನನ್ನ ತಾತ ತೀರಿಕೊಂಡು ಸುಮಾರು ಎಷ್ಟು ವರ್ಷಗಳಾಗಿವೆ ಎಂದು ನನಗೆ ಗೊತ್ತಿಲ್ಲ. ನನ್ನ ತಾತನನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತಿನ ಕಂದಾಯ ದಾಖಲೆಗಳು ಯಾವ ಕಾಲಕ್ಕೂ ನಮ್ಮ ಪೂರ್ವಜರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಿಃ 10.12.2015 ರಂದು ಸದರಿ ಹನುಮಂತಯ್ಯ 1 ನೇ ಪ್ರತಿವಾದಿ ಪರವಾಗಿ ದಾವಾ ಸ್ವತ್ತನ್ನು ಮರಣ ಶಾಸನ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳೇ ಪೂರ್ವಕಾಲದಿಂದಲೂ ಇಲ್ಲಿಯವರೆಗೂ ದಾವಾ ಸ್ವತ್ತಿನಲ್ಲಿ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹನುಮಂತಯ್ಯ ಈಗ ಜೀವಂತವಾಗಿಲ್ಲ ಎಂದರೆ ಸರಿ. ಸದರಿ ಹನುಮಂತಯ್ಯ ತೀರಿಕೊಳ್ಳುವ ಮುನ್ನವೇ ಅವನ ಹೆಂಡತಿ ನರಸಮ್ಮ ತೀರಿಕೊಂಡಿರುತ್ತಾಳೆ ಎಂದರೆ ಸರಿ. ಅವರ ಅಂತ್ಯ ಸಂಸ್ಕಾರದ ಕಾರ್ಯಗಳನ್ನು 1 ನೇ ಪ್ರತಿವಾದಿಯೇ ಮಾಡಿರುತ್ತಾರೆ ಎಂದರೆ ಇರಬಹುದು. ಸದರಿ ಮರಣ ಶಾಸನದ ಆಧಾರದ ಮೇಲೆ 1 ನೇ ಪ್ರತಿವಾದಿ ಹೆಸರಿಗೆ

ಕಂದಾಯ ದಾಖಲೆಗಳಾಗಿರುತ್ತವೆ ಎಂದರೆ ಸಾಕ್ಷಿ ಅವರು ಸುಳ್ಳು ಹೇಳಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 25.01.2023 ರಂದು 1 ನೇ ಪ್ರತಿವಾದಿ ತಲಾ 24 ಗುಂಟೆ ಜಮೀನನ್ನು 2 ಮತ್ತು 3 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನಮಗೆ ಮೋಸ ಮಾಡಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮೂಲ ಸ.ನಂ.65, ನಂತರ 24/3 ಮತ್ತು 24/5 ಎಂದು ಹೊಸ ನಂಬರು ಆಗಿರುತ್ತದೆ. ಸಾಮಾನ್ಯವಾಗಿ ಯಾವುದೇ ಜಮೀನಿನಲ್ಲಿ ಸ್ವಲ್ಪ ಭಾಗ ಮಾರಾಟ ಮಾಡಬೇಕಾದರೆ 11-ಇ ಸ್ಕೆಚ್ ಮಾಡಸಬೇಕಾಗುತ್ತದೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳಿಗೆ ಮಾರಾಟ ಮಾಡುವ ಮುನ್ನ 11-ಇ ಸ್ಕೆಚ್ ಮಾಡಿಸಲಾಗಿತ್ತು ಎಂದರೆ ನಮಗೆ ಗೊತ್ತಿಲ್ಲದೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾವು ದಾವಾ ಸ್ವತ್ತಿನಲ್ಲಿ ಇಲ್ಲದೇ ಇರುವ ಕಾರಣ ಸ್ಥಳ ಪರಿಶೀಲನೆಗೆ ಬಂದಾಗ ನಮಗೆ ಗೊತ್ತಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೈಕಿ 6 ಎಕರೆ 16 ಗುಂಟೆಯಲ್ಲಿ 1 ನೇ ಪ್ರತಿವಾದಿ, ಉಳಿಕೆ 24 ಗುಂಟೆಯಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ನಾವು ಯಾವುದೇ ಕಂದಾಯ ಪಾವತಿ ಮಾಡಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾವು ಸ್ವಾದೀನದಲ್ಲಿ ಇಲ್ಲದೇ ಇರುವ ಕಾರಣ ನಾವು ಯಾವುದೇ ಕಂದಾಯ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಪೂರ್ವಜರೂ ಸಹಾ ಯಾವುದೇ ಕಂದಾಯ ಪಾವತಿ ಮಾಡಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಗಳ ಜಮೀನನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ವಂಶವೃಕ್ಷ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ**.)**

ಓ ಹೇ ಕೇ ಸರಿ ಇದೆ**.**

**Sd/-**

**(ದೀಪು ಬಿ.ಸಿ.)**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ತುರುವೇಕೆರೆ.**